(62)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ, ಶ್ರೀ ಪ್ರಕಾಶ್ ಕೆ ರಾಥೋಡ್, ಹಾಗೂ ಇತರರು ನಿಯಮ-330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:62ಕ್ಕೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ.**

******

**ಪ್ರಶ್ನೆ:**

ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದಲ್ಲಿ ಸುಮಾರು ರೂ.47 ಕೋಟಿಗಳ ಅವ್ಯವಹಾರ ನಡೆದಿದ್ದು, ಸುಮಾರು 913 ಕಾಮಗಾರಿಗಳು ನಡೆಸದನೇ ಬಿಲ್ಲುಗಳನ್ನು ತಯಾರಿಸಿ, ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಅಧಿಕಾರಿಗಳು ಇದರಲ್ಲಿ ಶಾಮೀಲು ಆಗಿರುವುದರಿಂದ ಈ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇವೆ.

**ಉತ್ತರ:**

ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಕಂಪನಿಯನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಟಿಡಿ 3 ಟಿಆರ್ಎ 74, ದಿನಾಂಕ:21.01.1980ರಲ್ಲಿ 'ಕರ್ನಾಟಕ ಟ್ರಕ್ ಟರ್ಮಿನಲ್ಸ್ ಪ್ರೈ. ಲಿ.' ಎಂಬ ಹೆಸರಿನಲ್ಲಿ ಸ್ಥಾಪನೆಗೊಂಡು ಸರ್ಕಾರದ ಆದೇಶ ಸಂಖ್ಯೆ: ಎಫ್‌ಟಿಡಿ 114 ಟಿಎಂಇ 89, ದಿನಾಂಕ:13.11.1991ರಲ್ಲಿ ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಎಂದು ಮರುನಾಮಕರಣಗೊಳಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಾರಿಇ 02 ನಸಾಸೇ 2018, ದಿನಾಂಕ:27.03.2018ರಲ್ಲಿ ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಕಂಪನಿಯ ನಿರ್ದೇಶಕ ಮಂಡಳಿಯ ಅಧಿಕಾರಿ/ಅಧಿಕಾರೇತರ ಸದಸ್ಯರು ಮತ್ತು ಸಂಘ ಸಂಸ್ಥೆಗಳ ಸದಸ್ಯರ ಪ್ರಾತಿನಿಧ್ಯವನ್ನು ಈ ಕೆಳಕಂಡಂತೆ ಪುನರ್‌ರಚಿಸಲಾಗಿದೆ:-

| ಕ್ರ.ಸಂ | ಅಧಿಕಾರಿ ನಿರ್ದೇಶಕರು | ಸದಸ್ಯರ ಸಂಖ್ಯೆ |
|---|---|---|
| 1. | ವ್ಯವಸ್ಥಾಪಕ ನಿರ್ದೇಶಕರು | 01 |
| 2. | ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಸಾರಿಗೆ ಇಲಾಖೆ | 01 |
| 3. | ಪೊಲೀಸ್ ಉಪ ಆಯುಕ್ತರು ಸಂಚಾರ (ಪಶ್ಚಿಮ) ಬೆಂಗಳೂರು ನಗರ | 01 |
| 4. | ಉಪ ಆಯುಕ್ತರು (ಭೂ ಸ್ವಾಧೀನ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 01 |
| 5. | ವಿಶೇಷಾಧಿಕಾರಿ (ಜಿ.ಪಂ) ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ | 01 |
| | **ಒಟ್ಟು** | **06** |

| ಕ್ರ.ಸಂ | ಅಧಿಕಾರೇತರ ನಿರ್ದೇಶಕರು | ಸದಸ್ಯರ ಸಂಖ್ಯೆ |
|---|---|---|
| 1. | ಅಧ್ಯಕ್ಷರು, ಸರ್ಕಾರದ ನಾಮ ನಿರ್ದೇಶನ | 01 |
| 2. | ಅಧಿಕಾರೇತರ ನಿರ್ದೇಶಕರು , ಸರ್ಕಾರದ ನಾಮ ನಿರ್ದೇಶನ | 06 |
| 3. | ಮೆ. ಕರ್ನಾಟಕ ಸರಕು ಸಾಗಾಣಿಕೆದಾರರ ಸಂಘ | 02 |
| 4. | ಬೆಂಗಳೂರು ಸಿಟಿ ಲಾರಿ ಟ್ರಾನ್ಸ್‌ಪೋರ್ಟಿಂಗ್ ಏಜೆಂಟ್ಸ್ ಅಸೋಸಿಯೇಷನ್ | 02 |
| 5. | ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ | 02 |
| | **ಒಟ್ಟು** | **13** |

ಕಾರ್ಯ್ಯೆಯನ್ನಯ ಹೊರಡಿಸಲಾದ ಮೇಲ್ಕಂಡ ಸರ್ಕಾರದ ಆದೇಶದಲ್ಲಿ ನಿರ್ದೇಶಕ ಮಂಡಳಿಯ ಅಧಿಕಾರಿಯುತ ನಿರ್ದೇಶಕರಲ್ಲಿ ಸಾರಿಗೆ ಸಚಿವಾಲಯದಿಂದ ಪ್ರತಿನಿಧಿ ಇರುವುದಿಲ್ಲ. ಆದರೆ, ಆರ್ಥಿಕ ಇಲಾಖೆಯ ಪ್ರತಿನಿಧಿಯು ಅಧಿಕಾರಿಯುತ ನಿರ್ದೇಶಕರಲ್ಲಿ ಒಬ್ಬರಾಗಿರುತ್ತಾರೆ.

**ಸದರಿ ಕಂಪನಿಯ ಉದ್ದೇಶ ಈ ಕೆಳಕಂಡಂತಿದೆ:-**

1. To carry on the business of 'Truck terminals' in all their branches and kinds and particularly by establishing sheds, godowns, ware houses, work-shops, parking places, Medical Dispensaries, Clinics, Hotels, and Canteens and other conveniences including loading and unloading facilities required by transport operators and Common Carriers.
2. To carry on the business of Truck dealers ship, assembling, importing or exporting, distributing, hiring, repairing, servicing of truck and storing of all automobile lubricating oils, diesel oils and enamel paint and synthetic rubber products including tyres, tubes, upholstery materials and batteries, hardware materials, scientific instruments, cutlery, electric materials and spare parts and accessories of trucks.
3. To provide all service to transport operators and their employees like canteen facilities, sports facilities, recreation facilities, telephone and postal facilities and other necessary and useful amenities.

ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ.ನಿಂದ 2020-21ನೇ ಸಾಲಿನಿಂದ 2022-23ರವರೆಗೆ ಸಂಸ್ಥೆಯಲ್ಲಿ ವೆಚ್ಚವಾಗಿರುವ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. 2021-22ನೇ ಸಾಲಿನ ಅಂತ್ಯದಲ್ಲಿ ವಿವಿಧ ಬ್ಯಾಂಕುಗಳಲ್ಲಿರುವ ಠೇವಣಿಯ ಮೊತ್ತ ಒಟ್ಟು ರೂ.77,35,65,507.96ಗಳಿದ್ದು, ದಿನಾಂಕ:04.11.2022ರಂದು ಒಟ್ಟು ಮೊತ್ತ ರೂ.28,18,13,607.00ಗಳಿರುವುದನ್ನು ಗಮನಿಸಲಾಯಿತು.

ಠೇವಣಿಯ ಮೊತ್ತದಲ್ಲಿ ವ್ಯತ್ಯಯಾಸ ಕಂಡುಬಂದ ಕಾರಣ ಡಿ.ಡಿ.ಯು.ಟಿ.ಟಿ.ಎಲ್.ನ 2019-20ನೇ ಸಾಲಿನಿಂದ ಇತ್ತೀಚಿನವರೆಗಿನ ಲೆಕ್ಕಪತ್ರಗಳನ್ನು/ ಆದಾಯ ಮತ್ತು ವೆಚ್ಚಗಳ ದಾಖಲೆಗಳನ್ನು ಲೆಕ್ಕಪರಿಶೋಧನೆ (Audit) ನಡೆಸುವಂತೆ ಮಹಾಲೇಖಪಾಲರನ್ನು ಕೋರಲು ಸಾರಿಗೆ ಇಲಾಖೆ ವತಿಯಿಂದ ಹಿಂದಿನ ಸರ್ಕಾರದ ಮಾನ್ಯ ಸಾರಿಗೆ ಸಚಿವರಿಗೆ ದಿನಾಂಕ:29.11.2022ರಂದು ಕಡತ ಸಂಖ್ಯೆ: ಟಿಡಿ 276 ಟಿಸಿಒ 2022 (ಭಾ-1) ರಲ್ಲಿ ಅನುಮೋದನೆ ಕೋರಲಾಗಿ, ಮಾನ್ಯ ಸಾರಿಗೆ ಸಚಿವರು ದಿನಾಂಕ:05.12.2022ರಂದು ಅನುಮೋದಿಸಿರುತ್ತಾರೆ.

ಮುಂದುವರೆದು, ಲೆಕ್ಕ ಪರಿಶೋಧನೆ ನಡೆಸುವಂತೆ ಮಹಾಲೇಖಪಾಲರನ್ನು ಕೋರಲು ಸಾರಿಗೆ ಇಲಾಖೆ ವತಿಯಿಂದ ಕಡತ ಸಂಖ್ಯೆ: ಟಿಡಿ 276 ಟಿಸಿಒ 2022 (ಭಾ-2)ರಲ್ಲಿ ದಿನಾಂಕ:29.11.2022ರಂದು ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು, ಆರ್ಥಿಕ ಇಲಾಖೆಯು ದಿನಾಂಕ:30.12.2022ರಂದು **"2019-20ನೇ ಸಾಲಿನಿಂದ ಈವರೆವಿಗೂ Audit ಮಾಡಿಸಿ, ವರದಿಯನ್ನು ತರಿಸಿಕೊಂಡು** ಆಡಳಿತ ಇಲಾಖೆಯೇ ಪರಿಶೀಲಿಸಿ ಮುಂದಿನ ಅಗತ್ಯ ಕ್ರಮವಹಿಸುವಂತೆ ತಿಳಿಸಿದೆ" ಎಂದು ಅಭಿಪ್ರಾಯ ನೀಡಿರುತ್ತದೆ. ಅದರಂತೆ, ಸಾರಿಗೆ ಇಲಾಖೆ ವತಿಯಿಂದ ಪ್ರಧಾನ ಮಹಾಲೇಖಪಾಲರಿಗೆ ದಿನಾಂಕ:13-12-2022 ಮತ್ತು 04-01-2023ರಂದು ಪತ್ರಗಳನ್ನು ಬರೆಯಲಾಗಿರುತ್ತದೆ.

ಮುಂದುವರೆದು, ಬೆಂಗಳೂರು ಸಿಟಿ ಲಾರಿ ಟ್ರನ್ಸ್‌ಪೋರ್ಟಿಂಗ್ ಏಜೆಂಟ್ಸ್ ಅಸೋಸಿಯೇಷನ್ ಹಾಗೂ ಕರ್ನಾಟಕ ಸರಕು ಸಾಗಾಣಿಕೆದಾರರ ಸಂಘದವರು ಸಲ್ಲಿಸಿರುವ ದೂರಿನಲ್ಲಿನ ಅಂಶಗಳ ಬಗ್ಗೆ ಸಾರಿಗೆ ಇಲಾಖೆ ವತಿಯಿಂದ ಹಿಂದಿನ ಸರ್ಕಾರದ ಮಾನ್ಯ ಸಾರಿಗೆ ಸಚಿವರಿಗೆ ದಿನಾಂಕ:14.02.2023ರಂದು ಕಡತ ಸಂಖ್ಯೆ: ಟಿಡಿ 276 ಟಿಸಿಒ 2022 (ಭಾ-1)ರಲ್ಲಿ ಆದೇಶ ಕೋರಲಾಗಿ, ಮಾನ್ಯ ಸಚಿವರು ಹಿಂದಿನ ಮಾನ್ಯ ಮುಖ್ಯಮಂತ್ರಿಯವರಿಗೆ ಅವಗಾಹನೆಗೆ ಮತ್ತು ಸೂಕ್ತ ನಿರ್ದೇಶನಕ್ಕಾಗಿ ದಿನಾಂಕ:15.03.2023ರಂದು ಕಡತ ಸಲ್ಲಿಸಲಾಗಿ "ಮಾದರಿ ಚುನಾವಣಾ ನೀತಿ ಸಂಹಿತೆ ಮುಕ್ತಾಯಗೊಂಡ ನಂತರ ಅವಶ್ಯವಿದ್ದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆ/ಅನುಮೋದನೆಗೆ ಸಲ್ಲಿಸುವಂತೆ" ತಿಳಿಸಿ ಕಡತವನ್ನು ದಿನಾಂಕ:18.04.2023ರಂದು ಹಿಂದಿರುಗಿಸಲಾಗಿರುತ್ತದೆ.

ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ.ನ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀ ಶಂಕರಪ್ಪ, ಅವಧಿಯಲ್ಲಿನ ಸುಮಾರು ರೂ.47.10 ಕೋಟಿ ಕೆಲಸಗಳು ಅನುಷ್ಠಾನದ ಬಗ್ಗೆ ಹಾಗೂ ತಾಂತ್ರಿಕ ಅಂಶಗಳ ಗುಣಮಟ್ಟದ ಬಗ್ಗೆ ಲೋಕೋಪಯೋಗಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳಿಂದ ಪರಿಶೀಲನೆ ನಡೆಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಸರ್ಕಾರದ ಸಾರಿಗೆ ಇಲಾಖೆಯ ದಿನಾಂಕ: 03.03.2023ರಲ್ಲಿ ಅನಧಿಕೃತ ಟಿಪ್ಪಣಿ ಮೂಲಕ ಕೋರಲಾಗಿ, ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು, ವಿಚಕ್ಷಣಾ ದಳ, ಬೆಂಗಳೂರು ಇವರು ಸದರಿ ಕಾಮಗಾರಿಗಳು **ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ, ಈ ಪ್ರಕರಣವನ್ನು ಸಾರಿಗೆ ಇಲಾಖೆ ವತಿಯಿಂದಲೇ ತನಿಖೆ ಕೈಗೊಂಡು ಕ್ರಮ ಜರುಗಿಸುವಂತೆ ದಿನಾಂಕ:12.05.2023ರಲ್ಲಿ ತಿಳಿಸಿರುತ್ತಾರೆ.**

ತದನಂತರ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ವಹಿಸುವ ಕುರಿತು ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ವ್ಯ.ವಸ್ಥಾಪಕ ನಿರ್ದೇಶಕರು, ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವರನ್ನು ಸರ್ಕಾರದ ಪತ್ರ ದಿನಾಂಕ:12.06.2023ರಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ ದಿನಾಂಕ:16.04.2023ರಂದು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಲೋಕಾಯುಕ್ತ ಪೊಲೀಸರು ಡಿ.ಡಿ.ಯು.ಟಿ.ಟಿ.ಎಲ್. ಕಛೇರಿಯಲ್ಲಿ ಶೋಧ ನಡೆಸಿ, ಕಡತಗಳನ್ನು ವಶಪಡಿಸಿಕೊಂಡಿರುತ್ತಾರೆ.

ಈ ಸಂಬಂಧ ಸಾರಿಗೆ ಇಲಾಖೆಯ ಪತ್ರ ಸಂಖ್ಯೆ:ಟಿಡಿ 276 ಟಿಸಿಎ 2022 (ಭಾ-1), ದಿನಾಂಕ:25.04.2023ರಲ್ಲಿ ಸದರಿ ಪ್ರಕರಣ/ಘಟನೆಯ ಕುರಿತು ಸಂಪೂರ್ಣ ವಿವರಗಳನ್ನು ಒದಗಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವರನ್ನು ಕೋರಲಾಗಿದ್ದು, ಮಾನ್ಯ ಲೋಕಾಯುಕ್ತ ಪೊಲೀಸರು ಶೋಧನಾ ತಂಡದೊಂದಿಗೆ ಕಛೇರಿಗೆ ಬಂದು ದಾಖಲಾತಿಗಳನ್ನು ಹಾಗೂ ಕಡತಗಳನ್ನು ಶೋಧನೆಗೆ ತೆಗೆದುಕೊಂಡಿರುವುದಾಗಿಯೂ ಕಡತ/ ದಾಖಲೆಗೆ ಸಂಬಂಧಿಸಿದಂತೆ ಅಧಿಕಾರಿ ಮತ್ತು ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಳ್ಳುತ್ತಿರುವುದಾಗಿಯೂ ದಿನಾಂಕ:18.05.2023ರಂದು ತಿಳಿಸಿರುತ್ತಾರೆ.

ಅಲ್ಲದೇ, ಪ್ರಕರಣ ಕುರಿತು ಉನ್ನತ ಮಟ್ಟದ ತನಿಖೆಗೆ ವಹಿಸುವ ಬಗ್ಗೆ ಅಥವಾ ಕಂಪನಿಯಿಂದ ವರದಿ ನಿರೀಕ್ಷಿಸಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ದಿನಾಂಕ:09.06.2023ರಂದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಆದೇಶ ಕೋರಲಾಗಿ, ಮಾನ್ಯ ಸಚಿವರು ದಿನಾಂಕ:19.06.2023ರಂದು " ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಿಂದ ತನಿಖೆ ನಡೆಯುತ್ತಿದೆಯೇ? ನಡೆಯುತ್ತಿದ್ದಲ್ಲಿ ಉನ್ನತ ಮಟ್ಟದ ತನಿಖೆ ನಡೆಸುವ ಅಗತ್ಯತೆ ಕುರಿತು ಪರಿಶೀಲಿಸುವಂತೆ ಸೂಚಿಸಿರುತ್ತಾರೆ. ಅದರಂತೆ, ಲೋಕಾಯುಕ್ತ ತನಿಖೆಯ ಇತ್ತೀಚಿನ ಹಂತದ ಮಾಹಿತಿ ಒದಗಿಸುವಂತೆ ವ್ಯ.ನಿ., ಡಿ.ಡಿ.ಯು.ಟಿ.ಟಿ.ಎಲ್. ಇವರನ್ನು ಸಾರಿಗೆ ಇಲಾಖೆಯ ಪತ್ರ ದಿನಾಂಕ:14.07.2023ರಲ್ಲಿ ಕೋರಲಾಗಿರುತ್ತದೆ.

ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ.ನ ಹಾಲಿ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ:23.09.2023ರಂದು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಅದು FIR ಸಂಖ್ಯೆ:243/2023, ದಿನಾಂಕ:23.09.2023ರಲ್ಲಿ ನಮೂದಾಗಿರುತ್ತದೆ.

ಡಿ.ಡಿ.ಯು.ಟಿ.ಟಿ.ಎಲ್.ನಲ್ಲಿ ವ್ಯ.ನಿ.ರಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ ಶಂಕರಪ್ಪ (ಮಾತೃ ಇಲಾಖೆ ವಾರ್ತಾ ಇಲಾಖೆ) ಇವರು ಸದರಿ ಅವಧಿಯಲ್ಲಿ ಹಣ ದುರುಪಯೋಗಪಡಿಸಿಕೊಂಡಿರುವುದಾಗಿ ಸಿ.ಐ.ಡಿ. ಅಧಿಕಾರಿಗಳು ಬಂಧಿಸಿದ್ದು, ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ವರದಿ ಸಲ್ಲಿಸುವಂತೆ ವ್ಯ.ನಿ., ಡಿ.ಡಿ.ಯು.ಟಿ.ಟಿ.ಎಲ್. ಇವರನ್ನು ಸಾರಿಗೆ ಇಲಾಖೆಯ ಪತ್ರ ದಿನಾಂಕ:03.06.2024ರಲ್ಲಿ ಕೋರಲಾಗಿರುತ್ತದೆ.

ಮಹಾಲೇಖಪಾರ ಕಛೇರಿಯಿಂದಲೂ ಸಹ ದಾಖಲೆಗಳನ್ನು ಪರಿಶೀಲಿಸಿ ದಿನಾಂಕ:21.06.2024ರಂದು ನೀಡಿರುವ ವರದಿಯಲ್ಲಿ "ಒಟ್ಟು ರೂ.48.60 ಕೋಟಿಗಳ ವೆಚ್ಚದ ಕಾಮಗಾರಿಗಳು ಕೈಗೊಂಡು ಮುಕ್ತಾಯಗೊಂಡಿರುವುದಾಗಿ ಕಂಪನಿಯ ದಾಖಲೆಗಳಲ್ಲಿದ್ದು, ಆದರೆ, ಭೌತಿಕ ಪರಿಶೀಲನೆ ನಂತರ ರೂ.39.42 ಕೋಟಿಗಳ ವೆಚ್ಚದ ಕಾಮಗಾರಿಗಳು ಕೈಗೊಂಡಿರುವ ಕುರಿತು ಯಾವುದೇ ಸಾಕ್ಷಿ ಇರುವುದಿಲ್ಲವೆಂದು ವರದಿ ನೀಡಿರುತ್ತದೆ. ಅದರಂತೆ, ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಆಯ್ದ ಏಜೆನ್ಸಿಗಳಿಗೆ ಸುಳ್ಳು ಬಿಲ್‌ಗಳನ್ನು ಕೈಗೊಳ್ಳದೇ ಇರುವ ಕಾಮಗಾರಿಗಳಿಗೆ ಪಾವತಿಸಲಾಗಿರುವುದರಿಂದ, ಕಂಪನಿಯು ರೂ.39.42 ಕೋಟಿಗಳವರೆಗೆ ನಷ್ಟವನ್ನು ಅನುಭವಿಸಿರುತ್ತದೆ" ಎಂದು ತಿಳಿಸಿರುತ್ತದೆ.

ಪ್ರಸ್ತುತ ಹಣ ದುರುಪಯೋಗಪಡಿಸಿಕೊಂಡಿರುವ ಸಂಬಂಧ ಡಿ.ಡಿ.ಯು.ಟಿ.ಟಿ.ಎಲ್.ನ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಡಿ.ಎಸ್. ವೀರಯ್ಯರವರನ್ನೂ ಸಹ ದಿನಾಂಕ:12.07.2024ರಂದು ಸಿ.ಐ.ಡಿ. ಅಧಿಕಾರಿಗಳು ಬಂಧಿಸಿರುತ್ತಾರೆ. ಪ್ರಸ್ತುತ ಸಿ.ಐ.ಡಿ ಅಧಿಕಾರಿಗಳು ಈ ಕುರಿತು ಕೈಗೊಂಡಿರುವ ತನಿಖೆ ಪ್ರಗತಿಯಲ್ಲಿರುತ್ತದೆ.

ಮೇಲ್ಕಂಡ ರೀತಿಯಲ್ಲಿ ಸಾರಿಗೆ ಸಚಿವಾಲಯವು ಡಿ.ಡಿ.ಯು.ಟಿ.ಟಿ.ಎಲ್.ನಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗದ ಬಗ್ಗೆ ಎಲ್ಲಾ ರೀತಿಯ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಕ್ರಮಗಳನ್ನು ಕಾಲಕಾಲಕ್ಕೆ ತೆಗೆದುಕೊಂಡಿದ್ದು, ವಿಳಂಬಕ್ಕಾಗಲೀ, ಲೋಪಕ್ಕಾಗಲೀ ಆಸ್ಪದವಾಗಿರುವುದಿಲ್ಲ.

ಸಂಖ್ಯೆ: ಟಿಡಿ 144 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು